ತಾಲ್ಲೂಕು.	ಫಾರೆಸ್ಟ್.	ಅಂಚೆ.	ಲದೈ ಮಾಡತಕ್ಕ ಮೊತ್ತ.	ಸರಾಸರಿ ಫಾಸಲೆ.
ಹೆಗ್ಗಡದೇವನಕೋಟೆ.	ಬೇಗೂರು ..	(1) ಗುಂಜೆ ..	2,000	
		(2) ಬೈರಿಗದ್ದೆ ..	4,000	
		(3) ವನಕೆಗುಂಡಿಮಾಳ ..	2,000	
	ಐನೂರುಮಾರಿಗುಡಿ ..	(1) ಕಲ್ಲುಕೆರೆ ..	4,000	
		(2) ವಾರಂಚಿ ..	2,000	
		(3) ಹಿಂಡುಸ್ತ್ಹಾಲ್ ಕಟ್ಟೆ ..	2,000	
	ಕಾಕನಕೋಟೆ ..	(1) ಆನೆಮಾಳ ..	2,000	
		(2) ತ್ಯಾಗದವುರದ ತಿಟ್ಟು ..	2,000	
		ಜುಮ್ಲಾ ..	20,000	

2. ತವೊಂ ದರಖಾಸ್ತುಗಳೂ "ಮೈಸೂರ್ ಡಿಸ್ಟ್ರಿಕ್ಟಿನಲ್ಲಿ ಫಾರೆಸ್ಟುಗಳಿಂದ ಅಂಚೆಗೆಳಿಗೆ ಸಾಗಿಸುವದಕ್ಕೆ ಮಾತ್ರವೇ, ದರಖಾಸ್ತು" ಯಂಬುವದಾಗಿ ಮೇಲ್‌ವಿಳಾಸ ಬರದು ಮೊಹರುಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಪ್ರತಿ ಬಂದು ಫಾರೆಸ್ಟಿಗೂ 50 ರೂಪಾಯಿ ಬೆಲೆಯುಳ್ಳ ಕರೆನ್ಸೀನೋಟುಗಳಲಿ, ಯಾ ಪ್ರೊನೋಟುಗಳಲಿ ರವಾನಿಸಬೇಕು. ದರಖಾಸ್ತುಗಳು ಅಜಮಾಯಿಷಿಯಿಂದ ಮೇಲ್ಕಂಡ ಕರೆನ್ಸೀನೋಟುಗಳನ್ನ ಮಾಪಸು ಮಾಡಲ್ಪಡುವವು.

3. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ 1896ನೇ ಇಸವಿ ಆಕ್ಟೋಬರು 31ನೇ ತಾರೀಖು ವರಿಗೆ ಅಂಗೀಕರಿಸಲ್ಪಡುವವು.

4. ದರಖಾಸ್ತು ಮಾಡಲು ಇಚ್ಛೈವುಳ್ಳ ಕಂಟ್ರಾಕ್ಟುದಾರನು ಮೇಲ್ಕಂಡ ಫಾರೆಸ್ಟುಗಳ ಪೈಕಿ ಯೊಂದಕ್ಕಿಂತಲೂ ಜಾಸ್ತೀ ಫಾರೆಸ್ಟುಗಳಿಂದ, ತಯಾರಾದ್ದನ್ನ ಸಾಗಿಸುವದಕ್ಕೆ ಮಾತ್ರ, ದರಖಾಸ್ತು ಮಾಡಿದ ಪಕ್ಷದಲ್ಲಿ ನಾಟುವನ್ನು ಪ್ರತಿ ಯೊಂದು ಫಾರೆಸ್ಟಿನಿಂದಲೂ ಅಂಚೆಗೆಳಿಗೆ ಸಾಗಿಸುವದಕ್ಕೆ ಮಾತ್ರ, ಪ್ರೊಪ್ಪಿಕೊಳ್ಳುವ, ಕಮ್ಮಿ ದರವನ್ನು ಬೇರೆ ಬೇರೆಯಾಗಿ ನಮೂದಿಸತಕ್ಕದ್ದು. ಸಲೆ ಅಡಿ 1ಕ್ಕೆ ಇಷ್ಟು ದರವೆಂತ ನಮೂದಿಸಬೇಕು.

5. ಸ್ ಈ 1897ನೇ ಇಸವಿ ಜನವರಿ 17ರ ಪೊಳಗಾಗಿ ಮೇಲೆ ನಮೂದಿಸಿರುವ ಪೂರಾ ಮೊತ್ತವನ್ನು ಆಯಾಯ ಅಂಚೆಗೆಳಿಗೆ ಸಾಗಿಸಬೇಕು.

6. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡದುಕೊಳ್ಳುವ ಬಗ್ಗೆ ಜಾಮೀನು ತರೀಕ ಫಾರೆಸ್ಟು 1ಕ್ಕೆ 100 ರೂಪಾಯಿ ಪ್ರಕಾರ ಡಿಪಾಜಿಟ್ಟು ಕಟ್ಟತಕ್ಕದ್ದು. ಮೇಲ್ಕಂಡ ಷರತ್ತು ಮೇರೆ ನಡಿಯಲು ತಪ್ಪಿದಲ್ಲಿ ಠೇವಣೀ ಮೊಬಲಗನ್ನ ಸರ್ಕಾರಕ್ಕೆ ಕೇರಿಸಿಕೊಳ್ಳಲ್ಪಡುವದು.

7. ಬ್ಯಾಸಿಗೆ ಕಾಲದಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಮಾಡಲ್ಪಡುವ ಕಾಯಿದೆ ಕಾನೂಗಳಂತೆ ನಡಿಯಲು ಕಂಟ್ರಾಕ್ಟುದಾರನು ಬದ್ಧನಾಗಿರುವನು.

8. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಕಮ್ಮಿದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟು ಕ್ಹಸರ್ವೇಟರ್ ಸಾಹೆಬರವರ ಮಂಜೂರಾತಿಗೆ ಬಳಪಟ್ಟು ಇರುತ್ತೆ.

9. ಸಾಮಾನುಗಳು ಸಾಗಿಸುವದಕ್ಕೆ ಗಾಡಿ, ರಸ್ತೆ ವಗ್ಗೆರೇ ದಾರಿಗಳನ್ನು ಮಾಡಿಕೊಡಲು ಸರ್ಕಾರದವರು ಬದ್ಧರಾಗಿಲ್ಲವಾದ ಸಬಬು ವುದ್ದೇಸಿಸುವ ಕಂಟ್ರಾಕ್ಟುದಾರನೇ ಆತನ ಹಾತ್‌ಲಾಗವಡಿನಿಂದ ತಕ್ಕ ಯೇರ್ಪಾಡುಗಳು ಮಾಡಿಕೊಳ್ಳತಕ್ಕದ್ದು. ಮರಗಳನ್ನು ಸಾಗಿಸದೆ, ಇರುದಪಕ್ಷ ಯಾವ ಸಬಬುಗಳನ್ನೂ ಅಂಗೀಕರಿಸಲಾರೆವು.

10. ವುದ್ದೇಸಿಸುವ ಕಂಟ್ರಾಕ್ಟುದಾರರು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರ್ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸಿನಲ್ಲಿ ವಿಚಾರಿಸಿ ತೆಗದುಕೊಳ್ಳಬಹುದು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಸೆಕ್ಷನ್ ಅನುಸರಿಸಿ ಕೊಡಲ್ಪಟ್ಟ ನೋಟಿಸ್.

ಬೆಂಗಳೂರು ಸಬ್ ಡಿವಿಜನ್ ಮುನ್‌ಸಿಫ್ ಕೋರ್ಟು.

ಸ್ ಈ 1895—96ನೇ ಇಸವಿ ಪ್ರೊಜಿನಲ್ ನಂಬರ್ 900.

ವಾದಿಗಳು.	ಪ್ರತಿವಾದಿಗಳು.
ಕಾರ್ಕಾರಹಳ್ಳಿ ತಾಲ್ಲೂಕು ಮರುಳವಾಡಿ ಗ್ರಾಮದಲ್ಲಿ ಇರುವವರು.	ಕಾರ್ಕಾರನಹಳ್ಳಿ ತಾಲ್ಲೂಕು ಮರುಳವಾಡಿ ಗ್ರಾಮದಲ್ಲಿ ಇರುವವರು.
1ನೇ ಪಾಂಚಾಳದ ದೊಡ್ಡಾಚಾರಿ.	1ನೇ ಗಾಣಿಗರ ಜುಟ್ಟ.
2ನೇ ಪಾಂಚಾಳದ ಚವುಡಾಚಾರಿ.	2ನೇ 1ನೇ ಪ್ರತಿವಾದಿ ಹೆಂಡತಿ ಪುಟ್ಟನಂಜಮ್ಮ.
3ನೇ ಮುಂಟಿಗಾಚಾರಿ.	

ಮೇಲ್ಕಂಡ ಮರುಳವಾಡಿ ಗ್ರಾಮದಲ್ಲಿ ಇರುವ ಗಣೇಶನದೇವಸ್ಥಾನವು ಡಿಟೋ ದೇವಸ್ಥಾನದ ಉತ್ತರಕಡೆ ಗೋಡೆ ಇದಕ್ಕೆ ಉತ್ತರದಲ್ಲಿ ಇರುವ ಖಾಲೀ ಜಮೀನ್ ಸಹ ವಾದಿಗಳೇ ಮೊದಲಾದ ಕುಲಸ್ತರಿಗೆ ಶೇರಿದ್ದಾದ್ದರಿಂದ ಪ್ರತಿವಾದಿಗಳಿಂದ ತಮ್ಮ ಸ್ವಾಧೀನಕ್ಕೆ ಬಿಡಿಸಿಕೊಡಬೇಕೆಂತ ಸದರೀ ವಾದಿಗಳು ಈ ಕೋರ್ಟಿನಲ್ಲಿ ದಾವಾ ತಂದು ಯಿರುವದ್ದರಿಂದಲೂ ಸದರೀ ಮರುಳವಾಡಿ ಗ್ರಾಮದ ಹತ್ತು ಜನ ಪಾಂಚಾಳದ ಮತಸ್ಥರಿಗೆ ಸಂಬಂಧಪಟ್ಟದ್ದೆಂತಲೂ ಸಹ ತಿಳಿಯಬರುವದರಿಂದ ಇದರಲ್ಲಿ ಹಕ್ಕು ಇರತಕ್ಕಂಥಾ ಯಲ್ಲಾ ಪಾಂಚಾಳದ ಜನಗಳೂ 1896ನೇ ಇಸವಿ ನವಂಬರ್ 10ನೇ ತಾರೀಖು ದಿವಿ 11 ಘಂಟೆಗೆ ಕೋರ್ಟು ರೂಬರೂಬ್ ಹಾಜರಾಗಿ ಮೊಕದ್ದಮಾ ನಡಿಸಬಹುದೆಂತ ಇದರಿಂದ ಮೇಲ್ಕಂಡ ಸಮಸ್ತ ಪಾಂಚಾಳದ ಜನಗಳಿಗೆ ತಿಳಿಸಿ ಇಧೆ.

ತಾರೀಖು ೫ನೇ ಮಾಹೆ ಅಕ್ಟೋಬರ್ ಸ್ ೧೮೯೬ನೇ ಇಸವಿ.

ಬಿ. ಶ್ರೀನಿವಾಸರಾವ್,
ಮುನಸಿಫ್.

ತಾರೀಖು 26ನೇ ಆಗಸ್ಟ್ 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟ್‌ಆಫಿಸ್ ಮನಿಆರ್ಡರ್ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಮುಂತಾದ ತಫ್ಸೀಲ್ ತಿಳಿಸಬೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುಂಥಾ ಕೂಪರ್ಗಳಿಗೆ ಮೇಲೆ ಅಸ್ಪಷ್ಟವಾಗಿ ಬರಿಯುವದರಿಂದಲೂ ವಿಶೇಷ ಗಲಾಟೆಗೆ ಆಸ್ಪದವಾಗಿರುವದರಿಂದ ಸರ್ವರಿಗೂ ತಿಳಿಸುವದೇನಂದರೆ,—ಯಲ್ಲಾ ತಾಲ್ಲೂಕು ಖಜಾನೆಗಳಲ್ಲಿಯೂ ಗೆಜೆಟ್ ಚಂದಾ ಮೊಬಲಗು ತೆಗದುಕೊಂಡು ರಸೀತಿ ಕೊಡುವ ಬಗ್ಯಾಗಿ ಆಪ್ಪಣೆ ಯಿಪ್ಪುವದ್ದರಿಂದ ಇನ್ನು ಮೇಲೆ ಮೈಸೂರ್ ಸೀಮೆ ಅಲ್ಲದ ಇತರ ಸ್ಥಳಗಳಿಂದ ಬರುವ ಮನಿಆರ್ಡರ್ ಹೊರ್ತಾಗಿ ಅನ್ಯಥಾ ಆ ಬಗ್ಯಾಗಿ ಈ ಆಫಿಸಿಗೆ ಕಳುಹಿಸಲ್ಪಡುವ ಯಾವ ಮನಿಆರ್ಡರುಗಳಿ ಈ ಆಫಿಸಿನಲ್ಲಿ ಅಂಗೀಕರಿಸಲ್ಪಡಲಾರದು ಮತ್ತು ಪೋಸ್ಟ್ ಕಾರ್ಡ್ ಮೂಲಕ ಅಥವಾ ನೋಟ್ ಪೇಪರಿಗಿಂತಲೂ ಕಮ್ಮಿಯಾದ ಕಾಗದ್ದಲ್ಲಿ ಬರಿಯಲ್ಪಡುವ ಯಾವ ಅಂಶಕ್ಕೂ ನಿಗೆ ಕೊಡಲ್ಪಡಲಾರದು.

ಸಿ. ರಾಘವಾಚಾರ್ಲು,
ಮೈಸೂರ್ ಗೆಜೆಟ್ ಕಂಪೈಲರ್.

Mysore Govt. Central Press, Bangalore.—1896.